## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಎನ್.ತಾರಾ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಭೋಗಾವತಿ ಗ್ರಾಮ ಪಂಚಾಯಿತಿ, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ ಆದೇಶ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ, ರವರ ಆದೇಶ ಸಂಖ್ಯೆ: ಜಿಪಂರಾ/ಸಿಂ-2/ಸಿಸಿಎ/11/ಪಂಅಅ/08-09/2012-13/3314, ದಿನಾಂಕ:05-09-2012.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ, ರವರ ಆದೇಶ ಸಂಖ್ಯೆ:ಜಿಪಂರಾ/ಸಿಂ-2/ಸಿಸಿಎ/16/ಗ್ರಾಪಂಕಾ/2010-11/12873, ದಿನಾಂಕ:18-02-2013
3. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿನಾಂಕ:20-01-2017ರ ಆದೇಶ.
4. ಶ್ರೀಮತಿ ಎನ್.ತಾರಾ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಇವರ ಮೇಲ್ಮನವಿ ದಿನಾಂಕ:20-02-2017
5. ಸರ್ಕಾರದಿಂದ ವಿಚಾರಣೆಗೆ ಹಾಜರಾಗಲು ನೀಡಿದ ತಿಳುವಳಿಕೆ ಪತ್ರ ದಿನಾಂಕ: 12-05-2017 ಮತ್ತು 16-05-2017.

**ಪ್ರಸ್ತಾವನೆ :**

ಶ್ರೀಮತಿ ಎನ್.ತಾರಾರವರು ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ಕಲ್ಲೂರು ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ,

**ಪ್ರಕರಣ 1:**

ಆರೋಪ 1. 2009-10ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ ಮಂಜೂರಾದ 135 ಫಲಾನುಭವಿಗಳ ಪೈಕಿ 68 ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ, ಮಾರ್ಗಸೂಚಿ ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುತ್ತಾರೆ.

ಆರೋಪ 2. 2009-10ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಬೇರೆ ಜಾತಿಯ ಫಲಾನುಭವಿಗಳನ್ನು ಪರಿಶಿಷ್ಟ ಜಾತಿಗೆ ಸೇರಿಸಿ ಆಯ್ಕೆ ಮಾಡಿ ಪರಿಶಿಷ್ಟ ಜನಾಂಗಕ್ಕೆ ಅನ್ಯಾಯ ಮಾಡಿರುತ್ತಾರೆ.

ಆರೋಪ3: ಕ.ಪಂ.ರಾಜ್ ಅಧಿನಿಯಮದಂತೆ ಗ್ರಾಮ ಪಂಚಾಯಿತಿ ಠರಾವು ಪುಸ್ತಕವು ಪಂಚಾಯಿತಿ ಕಾರ್ಯದರ್ಶಿಯವರ ಸುಪರ್ದಿನಲ್ಲಿ ಇರಬೇಕಾಗಿದ್ದು, ಠರಾವು ಪುಸ್ತಕವನ್ನು ಸರಿಯಾಗಿ ನಿರ್ವಹಿಸದೇ ಪರಿಶೀಲನಾ ಅಧಿಕಾರಿಗಳಿಗೆ ತಪ್ಪು ಮಾಹಿತಿಯನ್ನು ನೀಡಿರುತ್ತಾರೆ.

ಆರೋಪ4: 2009-10ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ ಮಂಜೂರಾದ 135 ಫಲಾನುಭವಿಗಳ ಪೈಕಿ ತಮ್ಮ ಕರ್ತವ್ಯ ನಿರ್ಲಕ್ಷ್ಯತನದಿಂದಾಗಿ 68 ಮನೆಗಳನ್ನು ರಾಜೀವ್ ಗಾಂಧಿ ವಸತಿ ನಿಗಮವು ರದ್ದುಪಡಿಸಲಾಗಿದ್ದು, 68 ಫಲಾನುಭವಿಗಳು ಯೋಜನೆಯ ಲಾಭವನ್ನು ಪಡೆಯುವಲ್ಲಿ ವಂಚಿತರಾಗಿರುತ್ತಾರೆ ಎಂಬ ಆರೋಪವು ಸೇರಿದಂತೆ ಎಲ್ಲಾ 4 ಆರೋಪಗಳು ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ರಾಯಚೂರು ಇವರು ನಡೆಸಿದ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ

"ಎನ್.ತಾರಾ, ಪಿ.ಡಿ.ಓ, ಬೋಗಾವತಿ ಗ್ರಾ.ಪಂ ರವರು ಈ ಹಿಂದೆ ಕಲ್ಲೂರು ಗ್ರಾಮ ಪಂಚಾಯಿತಿಯಲ್ಲಿ ಗ್ರೇಡ್-1 ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ ಕರ್ತವ್ಯ ಲೋಪಗಳಿಗೆ ಕರ್ನಾಟಕ ನಾಗರೀಕ ಸೇವಾ(ಸಿಸಿಎ) ನಿಯಮಗಳು 1957ರ ನಿಯಮ 8(iii)ರನ್ವಯ 2 ವಾರ್ಷಿಕ ವೇತನಬಡ್ತಿಗಳನ್ನು ಸಂಚಿತ ಪರಿಣಾಮಸಹಿತ ತಡೆಹಿಡಿಯುವ ದಂಡನೆಯನ್ನು ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮೇಲೆ ಓದಲಾದ (1)ರಲ್ಲಿ ಆದೇಶಿಸಿರುತ್ತಾರೆ.

**ಪ್ರಕರಣ. 2**

ಆರೋಪ 1. ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ರೂ.40.0ಲಕ್ಷ ಮೊತ್ತದ ಕಾಮಗಾರಿಯನ್ನು ನಿರ್ವಹಿಸದೆ ದಿನಾಂಕ:13-03-2011ರಂದು ಎಂಐಎಸ್ ಮಾಡಿ ಕರ್ತವ್ಯಲೋಪ ಎಸಗಿರುತ್ತಾರೆ.

ಆರೋಪ 2. ಶ್ರೀ ಮುರ್ತುಜಾ ಸಾಬ್, ಗ್ರೇಡ್-1 ಕಾರ್ಯದರ್ಶಿಯಾಗಿ ದಿನಾಂಕ: 28-02-2011ರಂದು ಕರ್ತವ್ಯಕ್ಕೆ ಹಾಜರಾಗಿದ್ದು, ಸದರಿ ನೌಕರರು ತಕ್ಷಣವೇ ಪಂಚಾಯಿತಿಯ ಪ್ರಭಾರವನ್ನು ನೀಡದೇ ದಿನಾಂಕ:15-03-2011ರಂದು ಪ್ರಭಾರವನ್ನು ನೀಡಿ ಕರ್ತವ್ಯಲೋಪ ಎಸಗಿರುತ್ತಾರೆ.

ಆರೋಪ 3. ಎಂಜಿಎನ್‌ಆರ್‌ಇಜಿಎ ಯೋಜನೆಯಡಿ ಕೈಗೊಳ್ಳಲಾದ ಕಾಮಗಾರಿಗಳ ಪಾವತಿಗಾಗಿ ಎಂಐಎಸ್ ಮಾಡುವ ಜವಾಬ್ದಾರಿ ಪಿ.ಡಿ.ಓರವರು ಹೊಂದಿದ್ದು, ಪಾಸ್‌ವರ್ಡ್‌ನ ಗೋಪ್ಯತೆಯನ್ನು ಕಾಪಾಡುವುದು ಪಿ.ಡಿ.ಓರವರ ಕರ್ತವ್ಯವಾಗಿರುತ್ತದೆ. ಅದ್ದರಿಂದ ಕಾಮಗಾರಿಯನ್ನು ನಿರ್ವಹಿಸದೇ ದಿನಾಂಕ:13-03-2011ರಂದು ರೂ.40 ಲಕ್ಷಗಳ ಕಾಮಗಾರಿಯನ್ನು ಎಂಐಎಸ್‌ನಲ್ಲಿ ಅಳವಡಿಸಲಾಗಿದ್ದು ಅದಕ್ಕೆ ಸದರಿ ನೌಕರರೇ ಜವಾಬ್ದಾರರಾಗಿರುತ್ತಾರೆ.

ಆರೋಪ 4: ದಿನಾಂಕ:18-03-2011ರಂದು ಕಾರ್ಯನಿರ್ವಾಹಕ ಅಧಿಕಾರಿಯವರು ಗ್ರಾಮ ಪಂಚಾಯಿತಿಗೆ ಭೇಟಿ ಪರಿಶೀಲಿಸಿದಾಗ ದಿನಾಂಕ:13-03-2011 ರಂದು ಎಂಐಎಸ್ ಆಗಿರುವುದು ಗೋಚರವಾಗಿದ್ದು, ಕರ್ತವ್ಯ ನಿರ್ಲಕ್ಷತೆಯಿಂದ ಆದ ಎಂಐಎಸ್‌ಗೆ ಪ್ರಭಾರ ಹೊಂದಿದ್ದ ನೌಕರರೇ ಜವಾಬ್ದಾರರಾಗಿರುತ್ತಾರೆ ಎಂಬ ಆರೋಪ ಸೇರಿದಂತೆ ನೌಕರರ ಮೇಲಿನ ಎಲ್ಲಾ 4 ಆರೋಪಗಳು ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ರಾಯಚೂರುರವರು ನಡೆಸಿದ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವುದರಿಂದ .

ಕರ್ನಾಟಕ ನಾಗರೀಕ ಸೇವಾ(ಸಿಸಿಎ) ನಿಯಮಗಳು 1957ರ ನಿಯಮ 8(iii)ರಂತೆ

"ಆರೋಪಿತ ನೌಕರರ 3 ವಾರ್ಷಿಕ ವೇತನಬಡ್ತಿಗಳನ್ನು ಸಂಚಿತ ಪರಿಣಾಮರಹಿತ ತಡೆಹಿಡಿಯುವ ದಂಡನೆಯನ್ನು ಹಾಗೂ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮೇಲೆ ಓದಲಾದ(2)ರಲ್ಲಿ ಆದೇಶಿಸಿರುತ್ತಾರೆ.

ಮೇಲ್ಕಂಡ 2 ಪ್ರಕರಣಗಳಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ನೀಡಿದ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿಸಂಖ್ಯೆ:7844/2014ರಂದು ಅರ್ಜಿ ದಾಖಲಿಸಿದ್ದರು. ಮೇಲೆ ಓದಲಾದ(3)ರಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿರುವ ಆದೇಶದ ಪ್ರಕಾರ ಶ್ರೀಮತಿ ತಾರಾ ರವರು ಸರ್ಕಾರಕ್ಕೆ ಮೇಲೆ ಓದಲಾದ (4)ರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ತಮ್ಮ ಮೇಲ್ಮನವಿಯಲ್ಲಿ,

ದಿನಾಂಕ:05-09-2012ರ ಆದೇಶಕ್ಕೆ ಸಂಬಂಧಿಸಿದಂತೆ,

- ಇಂದಿರಾ ಆವಾಸ್ ಯೋಜನೆಗಳ ಮಾರ್ಗಸೂಚಿ ಉಲ್ಲಂಘಿಸಿರುವುದಾಗಿ ಆರೋಪಿಸಿ ದಿನಾಂಕ:04-05-2011ರಂದು ದೋಷಾರೋಪಣಾ ಪಟ್ಟಿ ಜಾರಿಮಾಡಲಾಯಿತು. ತಾವು ಕಲ್ಲೂರು ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುವಾಗ, ಇಂದಿರಾ ಆವಾಜ್ ಯೋಜನೆಯ ಮಾರ್ಗಸೂಚಿಯನ್ನು ತಮ್ಮ ಸ್ವಂತ ಲಾಭಕ್ಕಾಗಿ ಉಲ್ಲಂಘಿಸಿರುವುದಿಲ್ಲ ಎಂದು ದಿನಾಂಕ:28-05-2011ರಂದು ಹೇಳಿಕೆ ನೀಡಿದರೂ ಸಹಾ ಸಹಾಯಕ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು ಎಂದು ತಿಳಿಸಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯನ್ನು ದಿನಾಂಕ:21-04-2012ರಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸಿದರೂ ಅದರ ಪ್ರತಿಯನ್ನು ನನಗೆ ಒದಗಿಸಿರುವುದಿಲ್ಲ ಎಂದು ಆಪಾದಿಸುತ್ತಾ ಸದರಿ ವರದಿಯ ಆಧಾರದ ಮೇಲೆ 3 ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ದಂಡನೆ ವಿಧಿಸಿರುತ್ತಾರೆ. ದಂಡನೆಯನ್ನು ವಿಧಿಸುವ ಮುನ್ನ ತಮಗೆ ಆರೋಪಪಟ್ಟಿಯೊಂದಿಗೆ 2ನೇ ಕಾರಣ ಕೇಳಿ ನೋಟೀಸನ್ನು ಜಾರಿಗೊಳಿಸಿ, ನನಗೆ ಲಿಖಿತ ಸಮಜಾಯಿಷಿ ನೀಡಲು ಅವಕಾಶ ನೀಡಿರುವುದಿಲ್ಲ.

- ತಾವು ಸೇವೆಗೆ ಸೇರಿದ ಒಂದು ತಿಂಗಳಲ್ಲಿಯೇ ವಸತಿಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಸಭೆಯನ್ನು ನಡೆಸಬೇಕಾದ ಅವಶ್ಯಕತೆಯಿದ್ದುದರಿಂದ ಅಧ್ಯಕ್ಷರು, ಸದಸ್ಯರು ಹಾಗೂ ಗ್ರಾಮ ಸಭೆಯಲ್ಲಿ ಸೇರಿದ ಜನರ ಸಮ್ಮುಖದಲ್ಲಿ ದಿನಾಂಕ:30-06-2009ರಂದು ನಡೆದ ಗ್ರಾಮ ಸಭೆಯಲ್ಲಿ ಫಲಾನುಭವಿಗಳ ಆಯ್ಕೆಯನ್ನು ಮಾಡಿರುವುದಾಗಿ ತಿಳಿಸದ್ದು, ಕಂಪ್ಯೂಟರ್ ಮಾಡುವ ಸಮಯದಲ್ಲಿ ಕೆಲವೊಂದು ಫಲಾನುಭವಿಗಳ ಜಾತಿಯು ಬದಲಾವಣೆಯಾಗಿ ಪರಿಶಿಷ್ಟ ಜಾತಿಯೆಂದು ನಮೂದಾಗಿತ್ತು. ಕಣ್ ತಪ್ಪಿನಿಂದ ಆದ ಪ್ರಮಾದವು ತಮ್ಮ ಗಮನಕ್ಕೆ ಬಂದ ಕೂಡಲೇ ಯಥಾಸ್ಥಿತಿಯಲ್ಲಿ ತಡೆಹಿಡಿದು, ಕಾಮಗಾರಿ ಆದೇಶವನ್ನು ನೀಡಿರುವುದಿಲ್ಲ, ನೊಂದಣಿ ಮಾಡಿಸಿರುವುದಿಲ್ಲ ಹಾಗೂ ಯಾವುದೇ ಹಣವನ್ನು ಸದರಿ ಫಲಾನುಭವಿಗಳಿಗೆ ಪಾವತಿ ಮಾಡಿರುವುದಿಲ್ಲ. ನಾನು ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟುಮಾಡಿರುವುದಿಲ್ಲ. ಈ ಬಗ್ಗೆ ವಿಚಾರಣಾಧಿಕಾರಿಗಳಿಗೆ ಮನವಿ ಮಾಡಿದರೂ ಕೂಡ ನನಗೆ ಎರಡು ವಾರ್ಷಿಕ ವೇತನಬಡ್ತಿಯನ್ನು ಸಂಚಿತಪರಿಣಾಮಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿರುತ್ತಾರೆ. ಆದುದರಿಂದ ದಯಾಳುಗಳಾದ ತಾವು ನನ್ನ ಮನವಿಯನ್ನು ಸಹಾನುಭೂತಿಯಿಂದ ಪರಿಗಣಿಸಿ ನನಗೆ ನೀಡಲಾದ ಶಿಕ್ಷೆಯಿಂದ ಮುಕ್ತಿನೀಡುವಂತೆ ಕೋರಿರುತ್ತಾರೆ.

ದಿನಾಂಕ:18-02-2013ರ ಆದೇಶಕ್ಕೆ ಸಂಬಂಧಿಸಿದಂತೆ,

- ತಾವು ಕಲ್ಲೂರು ಗ್ರಾಮ ಪಂಚಾಯಿತಿಯಿಂದ ಬಿಡುಗಡೆ ಹೊಂದಿದ 35ದಿನಗಳ ನಂತರ ಕಲ್ಲೂರು ಗ್ರಾಮ ಪಂಚಾಯಿತಿಯಲ್ಲಿ ಎಂಜಿಎನ್ಆರ್ಇಜಿಎ ಯೋಜನೆಯಡಿ ರೂ.40ಲಕ್ಷಗಳ ಎಂಐಎಸ್ ಆಗಿದೆ ಎಂದು ಮೇಲಾಧಿಕಾರಿಯವರು ದೂರವಾಣಿ ಮುಖಾಂತರ ಅವರಿಗೆ ಎಚ್ಚರಿಸಿ ಅದಕ್ಕೆ ಅವರೇ ಹೊಣೆಗಾರರೆಂದು ತಿಳಿಸಿದ ತಕ್ಷಣವೇ ಮೇಲಾಧಿಕಾರಿಗಳ ಸೂಚನೆಯಂತೆ ಎಂಐಎಸ್ ಆದ ಎಲ್ಲಾ ಎನ್ಎಂಆರ್‌ಗಳನ್ನು ಡಿಲೀಟ್ ಮಾಡಿಸಿರುತ್ತೇನೆ. ಈ ಘಟನೆಗೆ ಸಂಬಂಧಿಸಿದಂತೆ ಹೊಣೆಗಾರರಾದವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಈ ಘಟನೆ ಬಗ್ಗೆ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿ ತಮ್ಮ ತಪ್ಪಿಲ್ಲವೆಂದು ವಿನಂತಿಸಿದರೂ ಹಾಗೂ ತಮ್ಮ ಲಿಖಿತ ಸಮಜಾಯಿಷಿಯನ್ನು ನೀಡಿದರೂ ಕೂಡ ತಾವು ಮಾಡದ ತಪ್ಪಿಗಾಗಿ ತಮ್ಮನ್ನು ಹೊಣೆಗಾರರನ್ನಾಗಿಸಿ 3 ವಾರ್ಷಿಕ ವೇತನವನ್ನು ಸಂಚಿತ ಪರಿಣಾಮರಹಿತವಾಗಿ ತಡೆಹಿಡಿಯುವ ಶಿಕ್ಷೆಯನ್ನು ವಿಧಿಸಿರುತ್ತಾರೆ.
- ವಿಚಾರಣಾಧಿಕಾರಿಯವರು ದಿನಾಂಕ:18-09-2012ರಂದು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಕಂಡುಬಂದ ಕರ್ತವ್ಯ ಲೋಪಗಳಿಗೆ ಸಂಬಂಧಿಸಿದಂತೆ ದಂಡನೆಯನ್ನು ವಿಧಿಸುವ ಮುನ್ನ ತಮಗೆ ಆರೋಪಪಟ್ಟಿಯೊಂದಿಗೆ 2ನೇ ಕಾರಣ ಕೇಳಿ ನೋಟೀಸನ್ನು ಜಾರಿಗೊಳಿಸಿ, ನನಗೆ ಲಿಖಿತ ಸಮಜಾಯಿಷಿ ನೀಡಲು ಅವಕಾಶ ನೀಡಿರುವುದಿಲ್ಲ.

  ಆದುದರಿಂದ ಅವರ ಲಿಖಿತ ಸಮಜಾಯಿಷಿಯನ್ನು ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸುತ್ತಾ ನನಗೆ ವಿಧಿಸಲಾದ ದಂಡನೆಯನ್ನು ರದ್ದುಪಡಿಸುವ ಮೂಲಕ ತಮಗೆ ನ್ಯಾಯದೊರಕಿಸಿಕೊಡಬೇಕಾಗಿ ಪ್ರಾರ್ಥಿಸಿರುತ್ತಾರೆ.

ಈ ಮೇಲ್ಮನವಿಯ ಬಗ್ಗೆ ದಿನಾಂಕ:08-06-2017ರಂದು ವಿಚಾರಣೆಯನ್ನು ನಡೆಸಲಾಗಿದೆ. ದಿನಾಂಕ:08-06-2017ರಂದು ನಡೆದ ವಿಚಾರಣೆಗೆ ಅರ್ಜಿದಾರರು, ಜಿಲ್ಲಾ ಪಂಚಾಯಿತಿ ಪರವಾಗಿ ಉಪಕಾರ್ಯದರ್ಶಿಗಳಾದ ಶ್ರೀ ವೈ.ಎಂ.ಮಹಮ್ಮದ್ ಯೂಸುಫ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಶರಣಬಸವರವರು ಹಾಜರಿದ್ದರು.

ಈ ಮೇಲ್ಮನವಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಹಾಜರಿದ್ದ ಎಲ್ಲರ ಹೇಳಿಕೆಯನ್ನು ಪಡೆಯಲಾಯಿತು. ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿಗಳು ಆರೋಪಿತ ನೌಕರರ ನಿರ್ಲಕ್ಷ್ಯತೆಯಿಂದಾಗಿ 2009-10ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ 135ಫಲಾನುಭವಿಗಳ ಪೈಕಿ 68 ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ ಕಾರಣ ರಾಜೀವ್ ಗಾಂಧಿ ವಸತಿ ನಿಗಮದಿಂದ ಸದರಿ ಸಾಲಿನಲ್ಲಿ 68 ಫಲಾನುಭವಿಗಳು ವಸತಿ ಸೌಲಭ್ಯ ಪಡೆಯುವಲ್ಲಿ ಅವಕಾಶ ವಂಚಿತರಾಗಿರುತ್ತಾರೆ ಎಂದು ತಿಳಿಸಿದರು. ಅರ್ಜಿದಾರರು 2009-10ನೇ ಸಾಲಿನ ಇಂದಿರಾ ಆವಾಸ್ ಯೋಜನೆಯಡಿ 68 ಅನರ್ಹ ಫಲಾನುಭವಿಗಳ ಬದಲಾಗಿ 68 ಅರ್ಹ ಫಲಾನುಭವಿಗಳನ್ನು ಮತ್ತೊಮ್ಮೆ ಆಯ್ಕೆ ಮಾಡಲಾಗಿದೆ ಎಂದು ಇದಕ್ಕೆ ಸಂಬಂಧಿಸಿದ ದಾಖಲೆಯನ್ನು ಹಾಜರು ಪಡಿಸಿರುತ್ತಾರೆ. ಕಲ್ಲೂರು ಗ್ರಾಮ ಪಂಚಾಯಿತಿಯಿಂದ ತಾವು ವರ್ಗಾವಣೆಗೊಂಡ ನಂತರ ಕಲ್ಲೂರು ಗ್ರಾಮ ಪಂಚಾಯಿತಿಯ ಕಂಪ್ಯೂಟರ್ ಆಪರೇಟರ್‌ಗಳಾದ ಆದ ಅಬ್ದುಲ್ ರಜಾಕ್ ಹಾಗೂ ಜಲಾಲ್‌ರವರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಇತರ ಸದಸ್ಯರೊಂದಿಗೆ ಸೇರಿಕೊಂಡು ಪಾಸ್‌ವರ್ಡ್ ದುರುಪಯೋಗಪಡಿಸಿಕೊಂಡು ರೂ.33.0ಲಕ್ಷದ ಕಾಮಗಾರಿಗಳನ್ನು ದಿನಾಂಕ:13-03-2011 ಎಂಐಎಸ್‌ನಲ್ಲಿ ಅಳವಡಿಸದ್ದು, ಈ ವಿಷಯದ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಎಂಐಎಸ್‌ನಲ್ಲಿ ಅಳವಡಿಸಲಾದ ರೂ. 33.0ಲಕ್ಷಗಳ ನಮೂದುಗಳನ್ನು ಡಿಲೀಟ್ ಮಾಡಿಸಿರುತ್ತೇನೆ ಹಾಗೂ ಈ ಕೃತ್ಯಕ್ಕೆ ಕಾರಣರಾದ ಎಲ್ಲರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರು ದಾಖಲಿಸಿರುವುದಾಗಿ ದೂರಿನ ಪ್ರತಿಯನ್ನು ಸಲ್ಲಿಸಿರುತ್ತಾರೆ. ಈ ಘಟನೆಗೆ ಸಂಬಂಧಿಸಿದಂತೆ ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಮೇಲ್ಮನವಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿ ವಾಸ್ತವಾಂಶಗಳನ್ನು ಮನದಟ್ಟು ಮಾಡಿಕೊಂಡು, ಶ್ರೀಮತಿ ಎನ್.ತಾರಾರವರಿಗೆ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯವರು ವಿಧಿಸಿರುವ ದಂಡನಾದೇಶಗಳು ಸಮಂಜಸವಲ್ಲವೆಂದು ಸರ್ಕಾರವು ನಿರ್ಣಯಿಸಿದೆ.

ಆದುದರಿಂದ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/196/ಗ್ರಾಪಂಕಾ/2017**
**ಬೆಂಗಳೂರು, ದಿನಾಂಕ:06-09-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಎನ್.ತಾರಾ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಭೋಗಾವತಿ ಗ್ರಾಮ ಪಂಚಾಯಿತಿ, ಮಾನವಿ ತಾಲ್ಲೂಕು ಇವರ ವಿರುದ್ಧ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ ರವರು ವಿಧಿಸಿದ್ದ ಆದೇಶ ಸಂಖ್ಯೆ: ಜಿಪಂರಾ/ಸಿ-2/ಸಿಸಿಎ/11/ಪಂಅಅ/08-09/2012-13/3314, ದಿನಾಂಕ:05-09-2012 ಹಾಗೂ ಆದೇಶ ಸಂಖ್ಯೆ:ಜಿಪಂರಾ:ಸಿಂ-2:ಸಿಸಿಎ:16:ಗ್ರಾಪಂಕಾ:2010-11/12873, ದಿನಾಂಕ:18-02-2013ಗಳಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಪರಿಶೀಲಿಸಿದಾಗ ಆಪಾದಿತ ನೌಕರರು ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟುಮಾಡಿಲ್ಲದಿರುವುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರಿಗೆ ಮುಂದೆ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸಲು ಆದೇಶಿಸಿ ಎಚ್ಚರಿಕೆ ನೀಡಿದೆ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಮೇಲ್ಕಂಡ ಎರಡೂ ಆದೇಶಗಳನ್ನು ರದ್ದುಪಡಿಸಿ ಆದೇಶಿಸಿದೆ.

(ಪ್ರಧಾನ ಕಾರ್ಯದರ್ಶಿಯವರಿಂದ ಅನುಮೋದಿಸಿದೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

6/09

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮಾನವಿ ತಾಲ್ಲೂಕು, ರಾಯಚೂರು ಜಿಲ್ಲೆ.
4) ಸಂಬಂಧಿಸಿದ ನೌಕರರಿಗೆ
5) ಶಾಖಾ ರಕ್ಷಕ ಪ್ರತಿ